ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ:57:ಹಿಂ.ಮುಂ.ವೇ.ನಿ:2018-19:ಸೇವಿ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ,
ಬೆಂಗಳೂರು, ದಿನಾಂಕ:15.10.2018

ಇವರಿಗೆ:

**ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರು**
**ಹಾಗೂ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ**
**ಪ್ರಾಂಶುಪಾಲರು**

ಮಾನ್ಯರೆ,

**ವಿಷಯ:** ಸಿವಿಲ್ ಅಪೀಲು ಸಂಖ್ಯೆ:2368/2011ರ ಕುರಿತಂತೆ ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪಿನ ಹಿನ್ನಲೆಯಲ್ಲಿ ಹಿಂಬಡ್ತಿಗೊಂಡ ನೌಕರರಿಗೆ ವೇತನ ಪಾವತಿಸುವ ಬಗ್ಗೆ ಮಾರ್ಗದರ್ಶನ

**ಉಲ್ಲೇಖ:** ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ:277:ಸೇನೆನಿ:2018, ದಿನಾಂಕ:18.08.2018

** ** **

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ:277:ಸೇನೆನಿ: 2018, ದಿನಾಂಕ:18.08.2018ರಲ್ಲಿನ ಕಂಡಿಕೆ ಸಂಖ್ಯೆ(4)ರಲ್ಲಿ "ಮಾನ್ಯ ಅಡ್ವೋಕೇಟ್ ಜನರಲ್, ಕರ್ನಾಟಕ ಇವರು ನೀಡಿರುವ ಸಲಹೆ ಹಾಗೂ ಆರ್ಥಿಕ ಇಲಾಖೆಯು ನೀಡಿರುವ ಸಹಮತಿಯನ್ವಯ ಮಾನ್ಯ ಸರ್ವೋಚ್ಛ ನ್ಯಾಯಾಲಯವು ಸಿವಿಲ್ ಅಪೀಲು ಸಂಖ್ಯೆ:2368/2011ಕ್ಕೆ ಸಂಬಂಧಿಸಿದಂತೆ ದಿನಾಂಕ:09.02.2017 ರಂದು ನೀಡಿರುವ ತೀರ್ಪಿನ್ವಯ ಹಿಂಬಡ್ತಿಗೊಳಗಾದ ಅಧಿಕಾರಿ/ನೌಕರರು ಹಿಂಬಡ್ತಿಗೊಳ್ಳುವುದಕ್ಕೆ ಮೊದಲು ಕರ್ತವ್ಯ ನಿರ್ವಹಿಸುತ್ತಿದ್ದ ಹುದ್ದೆಯ ವೇತನವನ್ನು, ಮಾನ್ಯ ಸರ್ವೋಚ್ಛ ನ್ಯಾಯಾಲಯ ನೀಡುವ ಅಂತಿಮ ಆದೇಶವನ್ನು ಪಾಲಿಸತಕ್ಕದೆಂಬ UNDERTAKING ಅನ್ನು ಸಂಬಂಧಿಸಿದ ಅಧಿಕಾರಿ/ನೌಕರರಿಂದ ಪಡೆದು, ಅಡ್-ಹಾಕ್ ವೇತನವಾಗಿ ಪಾವತಿಸುವಂತೆ ಸಂಬಂಧಿಸಿದ ಎಲ್ಲಾ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿ(ಡಿ.ಡಿ.ಓ)ಗಳಿಗೆ ಸೂಚಿಸಿದೆ" ಎಂದು ಮತ್ತು ಕಂಡಿಕೆ ಸಂಖ್ಯೆ(5)ರಲ್ಲಿ "ಮೇಲ್ಕಂಡಂತೆ ಅಡ್-ಹಾಕ್ ವೇತನವನ್ನು ಹೆಚ್.ಆರ್.ಎಂ.ಎಸ್ ಮುಖಾಂತರ ಪಾವತಿಸಲು ಸಾಧ್ಯವಾಗದಿದ್ದ ಸಂದರ್ಭಗಳಲ್ಲಿ ಭೌತಿಕವಾಗಿ(manually) ವೇತನದ ಬಿಲ್ಲನ್ನು ಸಿದ್ಧಪಡಿಸಿ ಪಾವತಿಸಲು ಕ್ರಮ ಕೈಗೊಳ್ಳುವಂತೆಯೂ ಸಹ ಸೂಚಿಸಿದೆ" ಎಂದು ತಿಳಿಸಲಾಗಿರುತ್ತದೆ.

ಆದಕಾರಣ ಸಿವಿಲ್ ಅಪೀಲು ಸಂಖ್ಯೆ:2368/2011ರ ಕುರಿತಂತೆ ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪಿನ ಹಿನ್ನಲೆಯಲ್ಲಿ ಹಿಂಬಡ್ತಿಗೊಂಡ ನೌಕರರಿಗೆ ಮೇಲ್ಕಂಡ ಸರ್ಕಾರದ ಸುತ್ತೋಲೆಯಲ್ಲಿನ ನಿರ್ದೇಶನದಂತೆ ವೇತನ ಪಾವತಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

**(ಆಯುಕ್ತರ ಟಿಪ್ಪಣಿ ಆದೇಶದ ಮೇರೆಗೆ)**

ತಮ್ಮ ವಿಶ್ವಾಸಿ,

Shilpa

**ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು**

ಪ್ರತಿ:

1) ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಮಾಹಿತಿ ವಿಭಾಗ, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು- ಇಲಾಖಾ ವೆಬ್‌ಸೈಟ್‌ರಲ್ಲಿ ಸದರಿ ಮಾಹಿತಿಯನ್ನು ಪ್ರಕಟಿಸಲು ಸೂಚಿಸಿದೆ
2) ಕಛೇರಿ ಪ್ರತಿ